ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 21-11-1992

# *ಕರ್ಮದ ಗುಹ್ಯಗತಿಯ ಜ್ಞಾತ ಆಗಿ*

(कर्मों की गुह्य  गति के ज्ञाता बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ  ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ನಿಶ್ಚಿಂತಾ ಚಕ್ರವರ್ತಿಯನ್ನಾಗಿ ತಯಾರು ಮಾಡುವ ಬಾಪ್‌ದಾದಾ ತನ್ನ ಪ್ರಸನ್ನಚಿತ್ತ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಸರ್ವ ಖಜಾನೆಗಳನ್ನು ಕೊಡುವಂತಹ ತಂದೆ ಎಲ್ಲಾ ಮಕ್ಕಳ ಜಮಾದ ಖಾತೆಯನ್ನು ನೋಡುತ್ತಿದ್ದೆವು. ಖಜಾನೆಯಂತೂ ಎಲ್ಲಾ ಮಕ್ಕಳಿಗೆ ಅಪರಿಮಿತವಾಗಿ ಸಿಕ್ಕಿವೆ. ಮತ್ತು ಎಲ್ಲರಿಗೂ ಒಂದೇ ರೀತಿ, ಒಬ್ಬರ ಮೂಲಕವೇ ಸಿಕ್ಕಿದೆ. ಒಂದು ಖಜಾನೆಯಲ್ಲ ಆದರೆ ಅನೇಕ ಖಜಾನೆಗಳು ಪ್ರಾಪ್ತಿಯಾಗಿದೆ ಆದರೂ ಸಹ ಪ್ರತಿಯೊಬ್ಬರ ಜಮಾದ ಖಾತೆ  ಬೇರೆ-ಬೇರೆಯಾಗಿದೆ. ಕೆಲವರು ಸರ್ವ ಖಜಾನೆಗಳನ್ನು ಚೆನ್ನಾಗಿ ಜಮಾ ಮಾಡಿಕೊಂಡಿದ್ದಾರೆ ಮತ್ತು ಕೆಲವರು ಯಥಾ ಶಕ್ತಿ ಜಮಾ ಮಡಿಕೊಂಡಿದ್ದಾರೆ. ಎಷ್ಟು ಜಮಾ ಮಾಡಿಕೊಂಡಿದ್ದಾರೆಯೋ ಅಷ್ಟೇ ಚಲನೆ ಮತ್ತು ಚೆಹರೆಯಲ್ಲಿ ಆತ್ಮೀಯ ನಶೆ ಕಂಡುಬರುತ್ತದೆ. ಜಮಾ ಮಾಡಿಕೊಂಡಿರುವ ಆತ್ಮಿಕ ಗರ್ವ ಅನುಭವವಾಗುತ್ತದೆ. ಎಷ್ಟು ನಶೆಯೋ ಅಷ್ಟೇ ನಿಶ್ಚಿಂತ ಚಕ್ರವರ್ತಿಯ ಹೊಳಪು ಅವರ ಪ್ರತಿಯೊಂದು ಕರ್ಮದಲ್ಲಿ ಕಂಡುಬರುತ್ತದೆ ಇದೇ ಆತ್ಮಿಕ ನಶೆಯ ಮೊದಲನೆಯ

ಗುರುತಾಗಿದೆ. ಏಕೆಂದರೆ ಎಲ್ಲಿ ಆತ್ಮಿಕ ನಶೆ ಇದೆಯೋ ಅಲ್ಲಿ ಯಾವುದೇ ಚಿಂತೆ ಇರಲು ಸಾಧ್ಯವಿಲ್ಲ. ಹೇಗೆ ಬೆಳಕು ಮತ್ತು ಅಂಧಕಾರ ಜೊತೆಯಲ್ಲಿ ಇರಲು ಸಾಧ್ಯವಿಲ್ಲವೋ ಹಾಗೆಯೇ ಈ ನಶೆ ಮತ್ತು ಚಿಂತೆ ಎರಡೂ ಒಟ್ಟಿಗೆ ಒಂದೇ ಜೊತೆಯಲ್ಲಿ ಇರಲು ಸಾಧ್ಯವಿಲ್ಲ.

ನಿಶ್ಚಿಂತ ಚಕ್ರವರ್ತಿಯ ವಿಶೇಷತೆಯಾಗಿದೆ ಅವರು ಸದಾ ಪ್ರಶ್ನಚಿತ್ತರ ಬದಲಾಗಿ ಪ್ರಸನ್ನಚಿತ್ತರಾಗಿರುತ್ತಾರೆ. ಪ್ರತಿಯೊಂದು ಕರ್ಮದಲ್ಲಿ ಸ್ವಯಂನ ಸಂಬಂಧದಲ್ಲಿ ಅಥವಾ ಸರ್ವರ ಸಂಬಂಧದಲ್ಲಿ ಅಥವಾ ಪ್ರಕೃತಿಯ ಸಂಬಂಧದಲ್ಲಿಯೂ ಸಹ ಯಾವುದೇ ಸಮಯ. ಯಾವುದೇ ಮಾತಿನಲ್ಲಿ ಸಂಕಲ್ಪ ಮಾತ್ರದಲ್ಲಿಯೂ ಸಹ ಪ್ರಶ್ನಾರ್ಥಕ ಚಿಹ್ನೆ ಇರುವುದಿಲ್ಲ. ಇದು ಏಕೆ ಹೇಗೆ ಅಥವಾ ಇದು ಏನಾಗುತ್ತಿದೆ. ಈ ರೀತಿಯೂ ಆಗುತ್ತದೆಯೇನು? ಪ್ರಸನ್ನಚಿತ್ತ ಆತ್ಮರ ಸಂಕಲ್ಪದಲ್ಲಿ ಪ್ರತಿಯೊಂದು ಕರ್ಮ ಮಾಡುತ್ತಾ, ನೋಡುತ್ತಾ, ಕೇಳುತ್ತಾ, ಯೋಚಿಸುತ್ತಾ ಏನಾಗುತ್ತದೆಯೋ ಅದು ನನಗೋಸ್ಕರ ಒಳ್ಳೆಯದು ಮತ್ತು ಸದಾ ಒಳ್ಳೆಯದೇ ಆಗಬೇಕಾಗಿದೆ ಎಂಬುದೇ ಇರುತ್ತದೆ. ಪ್ರಶ್ನಚಿತ್ತರಾದ ಆತ್ಮ ಏಕೆ ಏನು. ಹೀಗೆ, ಹಾಗೆ- ಈ ಗೊಂದಲದಲ್ಲಿ ಸ್ವಯಂನ್ನು ನಿಶ್ಚಿಂತತೆಯಿಂದ ಚಿಂತೆಯಲ್ಲಿ ತಂದುಬಿಡುತ್ತಾರೆ ಮತ್ತು ನಿಶ್ಚಿಂತ ಆತ್ಮ ಕೆಟ್ಟದ್ದನ್ನೂ ಒಳ್ಳೆಯದರಲ್ಲಿ ಪರಿವರ್ತನೆ ಮಾಡಿಕೊಳ್ಳುತ್ತಾರೆ ಆದ್ದರಿಂದ ಅವರು ಸದಾ ಪ್ರಸನ್ನವಾಗಿರುತ್ತಾರೆ.

ಈಗಿನ ಕಾಲದಲ್ಲಿ ವಿಜ್ಞಾನದ ಸಾಧನಗಳಿಂದಲೂ ಸಹ ಹಾಳಾದ, ಕೆಟ್ಟುಹೋದ ವಸ್ತುವನ್ನು ಪರಿವರ್ತನೆ ಮಾಡಿ ಒಳ್ಳೆಯ ವಸ್ತುವನ್ನಾಗಿ ಮಾಡಿಬಿಡುತ್ತಾರೆ. ಪ್ರಸನ್ನಚಿತ್ತ ಆತ್ಮ ಶಾಂತಿಯ ಶಕ್ತಿಯಿಂದ ಭಲೆ ಮಾತು ಕೆಟ್ಟದ್ದೇ ಇರಲಿ, ಸಂಬಂಧದಿಂದ ಕೆಟ್ಟ ಅನುಭವವೇ ಇರಲಿ, ಆದರೆ ಅವರು ಕೆಟ್ಟದನ್ನೂ ಸಹ ಒಳ್ಳೆಯದರಲ್ಲಿ ಪರಿವರ್ತನೆ ಮಾಡಿಕೊಂಡು ಸ್ವಯಂನಲ್ಲೂ ಸಹ ಧಾರಣೆ ಮಾಡಿಕೊಳ್ಳುತ್ತಾರೆ ಮತ್ತು ಅನ್ಯರನ್ನೂ ಸಹ ತಮ್ಮ ಶುಭಭಾವನೆ, ಶ್ರೇಷ್ಠ ಸಂಕಲ್ಪದಿಂದ ಕೆಟ್ಟದ್ದನ್ನು ಪರಿವರ್ತನೆ ಮಾಡಿ ಒಳ್ಳೆಯದನ್ನು ಧಾರಣೆ ಮಾಡುವ ಶಕ್ತಿ ಕೊಡುತ್ತಾರೆ. ಕೆಲವು ಮಕ್ಕಳು ಯೋಚಿಸುತ್ತಾರೆ ಮತ್ತು ಹೇಳುತ್ತಾರೆ "ಅದು ಇರುವುದೇ ತಪ್ಪು, ಕೆಟ್ಟ ಮಾತು, ತಪ್ಪನ್ನು ತಪ್ಪೆಂದು ಹೇಳಲೇಬೇಕಾಗುತ್ತದೆಯಲ್ಲವೇ! ಅಥವಾ ತಪ್ಪನ್ನು ತಪ್ಪೆಂದು ತಿಳಿಯಲೇಬೇಕಾಗುತ್ತದೆಯಲ್ಲ ವೇ! ಆದರೆ ತಪ್ಪನ್ನು ತಪ್ಪೆಂದು ತಿಳಿಯುವುದು, ಆ ತಪ್ಪನ್ನು ತಪ್ಪು ಎಂದು ತಿಳಿಯುವುದು, ಅರಿಯುವುದು ಬೇರೆ ವಿಷಯ ಆದರೆ ಜ್ಞಾನಸ್ವರೂಪದಿಂದ ತಿಳಿಯುವಂತಹವರು ತಿಳಿದ ನಂತರ ಸ್ವಯಂನಲ್ಲಿ ಯಾವುದೇ ಆತ್ಮನ ಕೆಟ್ಟದ್ದನ್ನು ಕೆಟ್ಟರೂಪದಲ್ಲಿ ತನ್ನ ಬುದ್ಧಿಯಲ್ಲಿ ಧಾರಣೆ ಮಾಡುವುದಿಲ್ಲ. ಅಂದಾಗ ತಿಳಿಯುವುದು ಬೇರೆ ಮಾತಾಗಿದೆ. ತಿಳಿಯುವವರೆಗೂ ಸರಿಯಿದೆ, ಆದರೆ ಸ್ವಯಂನಲ್ಲಿ ಅಲ್ಲ, ತಮ್ಮ ಚಿತ್ತದಲ್ಲಿ, ತಮ್ಮ ಬುದ್ಧಿಯಲ್ಲಿ, ತಮ್ಮ ವೃತ್ತಿಯಲ್ಲಿ. ತಮ್ಮ ವಾಣಿಯಲ್ಲಿ ಬೇರೆಯವರ ತಪ್ಪನ್ನು ತಪ್ಪಿನ ರೂಪದಲ್ಲಿ ಧಾರಣೆ ಮಾಡಬಾರದು, ಸಮಾವೇಶ ಮಾಡಿಕೊಳ್ಳಬಾರದು. ತಿಳಿಯುವುದು ಮತ್ತು ಧಾರಣೆ ಮಾಡುವುದರಲ್ಲಿ ಅಂತರವಿದೆ.

ತಮ್ಮನ್ನು ರಕ್ಷಣೆ ಮಾಡಿಕೊಳ್ಳಲು ಇದು ತಪ್ಪಾಗಿದೆ ಎಂದು ಹೇಳುತ್ತಾರೆ. ತಪ್ಪನ್ನು ತಪ್ಪೇ ಎಂದು ಹೇಳಬೇಕಾಗುತ್ತದೆ. ಆದರೆ ಬುದ್ಧಿವಂತರ ಕೆಲಸವೇನಾಗಿದೆ? ಬುದ್ಧಿವಂತರು ಒಂದುವೇಳೆ ಇದು ತಪ್ಪು ಎಂದು ತಿಳಿದಿದ್ದೇ ಆದರೆ, ಆ ತಪ್ಪನ್ನು ತಮ್ಮ ಹತ್ತಿರ ಜಮಾ ಮಾಡಿಕೊಳ್ಳುತ್ತೀರಾ? ತಮ್ಮ ಹತ್ತಿರ ಚೆನ್ನಾಗಿ ಸಂಭಾಲನೆ ಮಾಡಿಕೊಂಡು ಇಟ್ಟುಕೊಳ್ಳುತ್ತೀರಾ? ಬಿಟ್ಟು ಬಿಡಬೇಕಾಗುತ್ತದೆಯಲ್ಲವೇ ಅಥವಾ ಜಮಾ ಮಾಡಿಕೊಳ್ಳುವುದು ಬುದ್ಧಿವಂತಿಕೆಯೇ? ಇದು

ಬುದ್ಧಿವಂತಿಕೆಯೇ? ಮತ್ತೆ ಯೋಚನೆ ಮಾಡಿ. ಒಂದುವೇಳೆ ಕೆಟ್ಟ ಮಾತು ಅಥವಾ ಕೆಟ್ಟ ಚಲನೆ ಇದ್ದರೆ ಸ್ವಯಂನಲ್ಲಿ ಧಾರಣೆ ಮಾಡಿದರೆ ನಿಮ್ಮ ಬುದ್ಧಿ, ವಾಣಿ ಸದಾ ಸಂಪೂರ್ಣ ಸ್ವಚ್ಛ ಎಂದು ಹೇಳಲಾಗುತ್ತದೆಯೇ? ಒಂದುವೇಳೆ ಸ್ವಲ್ಪವಾದರೂ ವೃತ್ತಿ, ವಾಣಿಯಲ್ಲಿ ಯಾವುದೇ ಕಲೆ ಉಳಿದುಕೊಂಡರೆ, ಕೊಳಕು ಉಳಿದುಕೊಂಡರೆ ಡಿಫೆಕ್ಟ್(ಲೋಪ) ವುಳ್ಳಂತಹವರು ಎಂದೂ ಪರ್‌ಫೆಕ್ಟ್(ಪರಿಪಕ್ವ) ಆಗಲು ಸಾಧ್ಯವಿಲ್ಲ. ಒಂದುವೇಳೆ ಯಾವುದೇ ಕೆಟ್ಟದ್ದು ಮನಸ್ಸಿನಲ್ಲಿ ಇದ್ದಿದ್ದೇ ಆದರೆ ಅವರ ಮನಸ್ಸು ಸದಾ ಪ್ರಸನ್ನಚಿತ್ತನಾಗಿರಲು ಸಾಧ್ಯವಿಲ್ಲ. ಒಬ್ಬರ ಮುಂದೆ ವರ್ಣನೆ ಮಾಡಿರಬಹುದು. ಅನೇಕರ ಮುಂದೆ ವರ್ಣನೆ ಮಾಡಿರಬಹುದು ಅವರ ಮನಸ್ಸಿನಲ್ಲಿ ಧಾರಣೆಯಾಗಿರುವ ವಿಷಯ ಮಾತಿನಲ್ಲಿ ಅವಶ್ಯವಾಗಿ ಬರುತ್ತದೆ.

ಆದರೆ ಕರ್ಮದ ಗತಿಯ ಗುಹ್ಯರಹಸ್ಯವನ್ನು ಸದಾ ಎದುರಿನಲ್ಲಿ ಇಟ್ಟುಕೊಳ್ಳಿ ಒಂದುವೇಳೆ ಯಾರದಾದರೂ ಕೆಟ್ಟದ್ದನ್ನು ಅಥವಾ ತಪ್ಪಿನ ಮಾತನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದರ ಜೊತೆಗೆ ವರ್ಣನೆ ಮಾಡುತ್ತೀರೆಂದರೆ ಈ ವ್ಯರ್ಥ ವರ್ಣನೆ ಹೇಗೆ ಗುಂಬಜಿನಲ್ಲಿ ಶಬ್ದ ಮಾಡಿದಾಗ ಆ ಧ್ವನಿ ಮತ್ತೆ ತಮ್ಮ ಬಳಿಯೇ ದೊಡ್ಡ ರೂಪದಲ್ಲಿ ಬರುತ್ತದೆ. ಗುಂಬಜಿನಲ್ಲಿ ಶಬ್ದ ಮಾಡಿ ಕೂಗಿ ನೋಡಿದ್ದೀರಾ? ಒಂದುವೇಳೆ ಯಾರದಾದರೂ ತಪ್ಪನ್ನು ಅಥವಾ ಕೆಟ್ಟದ್ದನ್ನು ಹರಡುವ ಸಂಸ್ಕಾರವಿದ್ದರೆ ಅದನ್ನು ತಾವು ಅಭ್ಯಾಸವೆಂದು ಕರೆಯುತ್ತೀರಿ. ನೀವು ಈ ದಿನ ಯಾರನ್ನಾದರು ನಿಂದನೆ ಮಾಡುತ್ತೀರಿ ಮತ್ತು ತನನ್ನು ನಾನು ಬಹಳ ತಿಳುವಳಿಕೆವುಳ್ಳವನೆಂದು, ನಾನು ಎಂದೂ ತಪ್ಪು ಮಾಡುವುದಿಲ್ಲವೆಂದು ತಿಳಿದುಕೊಂಡು ವರ್ಣನೆ ಮಾಡುತ್ತೀರಿ. ಆದರೆ ಇದು ಪಕ್ಕಾ ನಿಯಮವಿದೆ ಅಥವಾ ಕರ್ಮದ ಸಿದ್ಧಾಂತವಿದೆ. ಈ ದಿನ ತಾವು ಯಾರದೇ ನಿಂದನೆ ಮಾಡುತ್ತೀರೆಂದರೆ ನಾಳೆ ತಮ್ಮ ನಿಂದನೆಯನ್ನು ಎರಡುಪಟ್ಟು ಮಾಡುತ್ತಾರೆ ಏಕೆಂದರೆ ಈ ತಪ್ಪು ಮಾತು ಹೇಗೆ ವಿಶೇಷ ಕಾಯಿಲೆಯ ರೋಗಾಣುಗಳು ಬಹಳ ತೀವ್ರವಾಗಿ ಹರಡುತ್ತವೆಯೋ ಅಷ್ಟೇ ತೀವ್ರಗತಿಯಿಂದ ಹರಡುತ್ತದೆ. ಆ ರೋಗಾಣುಗಳು ಯಾರ ನಿಂದನೆಯನ್ನು ಮಾಡಿದ್ದೀರೋ ಅವರ ಬಳಿ ಬಹಳ ಬೇಗ ಹೋಗಿ ತಲುಪುತ್ತವೆ. ತಾವು ಒಂದು ನಿಂದನೆ ಮಾಡಿರಬಹುದು ಅವರು ತಮಗೆ ತಪ್ಪನ್ನು ಸಿದ್ಧ ಮಾಡಲು ತಮ್ಮ ನಿಂದನೆಯನ್ನು ಹತ್ತುಪಟ್ಟು ಮಾಡುತ್ತಾರೆ. ಅಂದಾಗ ಪರಿಣಾಮ ಏನಾಯಿತು? ಕರ್ಮದಗತಿ ಏನಾಯಿತು? ಅದು ಹಿಂತಿರುಗಿ ಎಲ್ಲಿಗೆ ಬಂದಿತು? ಒಂದುವೇಳೆ ತಮಗೆ ಆ ಆತ್ಮನನ್ನು ಸರಿಪಡೆಸಬೇಕೆಂಬ ಶುಭಭಾವನೆಯಿದ್ದರೆ ಆ ತಪ್ಪು ಮಾತನ್ನು ಶುಭಭಾವನೆಯ ಸ್ವರೂಪದಲ್ಲಿ ವಿಶೇಷ ನಿಮಿತ್ತ ಸ್ಥಾನದಲ್ಲಿ ತಿಳಿಸಬಹುದಾಗಿದೆ. ಆ ಮಾತನ್ನು ಹರಡುವುದು ತಪ್ಪಾಗಿದೆ. ಕೆಲವರು ಹೇಳುತ್ತಾರೆ - ನಾವು ಯಾರಿಗೂ ಹೇಳಲಿಲ್ಲ ಆದರೆ ಅವರು ಹೇಳುತ್ತಿದ್ದರು ನಾನು ಹಾ! ಹಾ! ಎಂದು ಹೇಳಿದೆ ಆದರೆ ಮಾತನಾಡಲಿಲ್ಲ. ತಮ್ಮ ಭಕ್ತಿಮಾರ್ಗದ ಶಾಸ್ತ್ರದಲ್ಲಿಯೂ ಸಹ ವರ್ಣನೆಯಿದೆ. ಕೆಟ್ಟಕರ್ಮ ಮಾಡಲಿಲ್ಲ ಆದರೆ ನೋಡಿದೆವು. ಜೊತೆಯನ್ನು ಕೊಟ್ಟರೆ ಅದನ್ನೂ ಸಹ ಪಾಪವೆಂದು ಹೇಳುತ್ತಾರೆ. ಹೌದು ಹೌದು! ಎಂದೆವು, ಇದೂ ಸಹ ಕರ್ಮದಗತಿಯ ಪ್ರಮಾಣ ಪಾಪದ ಭಾಗೀಧಾರರಾಗುವುದಾಗಿದೆ.

ವರ್ತಮಾನ ಸಮಯ ಕರ್ಮದ ಗತಿಯ ಜ್ಞಾನವನ್ನು ಬಹಳ ಸರಳವಾಗಿ ಪರಿಗಣಿಸುವುದರ ಲಕ್ಷಣವೇನು? ಅವರು ಸದಾ ಇದಂತೂ ಇತ್ತೀಚಿನ ದಿನಗಳಲ್ಲಿ ನಡೆಯುತ್ತಲೇ ಇರುತ್ತದೆ. ಇದನ್ನು ಅನ್ಯರೂ ಸಹ ಮಾಡುತ್ತಾರೆ ಎಂದು ಆಲೋಚನೆ ಮಾಡುತ್ತಾರೆ. ತನ್ನನ್ನು ತಾನು ಹಗುರ ಮಾಡಿಕೊಳ್ಳಲು ನಾನು ಇದನ್ನು ತಮಾಷೆಯಾಗಿ ಹೇಳಿದೆ ನನ್ನ ಭಾವ ಈ ರೀತಿ

ಇರಲಿಲ್ಲ ಹಾಗೆಯೇ ಹೇಳಿಬಿಟ್ಟೆ ಎಂದು ಹೇಳುತ್ತಾರೆ. ಈ ವಿಧಿ ತಾನು ಸಂಪೂರ್ಣ ಸಿದ್ದಿಯನ್ನು ಪಡೆಯುವುದರಲ್ಲಿ ಸೂಕ್ಷ್ಮ ವಿಘ್ನವಾಗಿಬಿಡುತ್ತದೆ. ಆದ್ದರಿಂದ ಜ್ಞಾನವಂತೂ ಬಹಳಷ್ಟು ಸಿಕ್ಕಿದೆ. ರಚಯಿತ ಮತ್ತು ರಚನೆಯ ಜ್ಞಾನವನ್ನು ಕೇಳುವುದು ವರ್ಣನೆ ಮಾಡುವುದು ಬಹಳ ಸ್ಪಷ್ಟವಾಗಿದೆ ಆದರೆ ಕರ್ಮದ ಗುಹ್ಯಗತಿಯ ಜ್ಞಾನ ಬುದ್ಧಿಯಲ್ಲಿ ಬಹಳ ಸ್ಪಷ್ಟವಾಗಿ ಇರುವುದಿಲ್ಲ. ಆದ್ದರಿಂದ ಇದನ್ನು ಸುಲಭವಾಗಿ ತೆಗೆದುಕೊಳ್ಳುತ್ತಾರೆ. ಕೆಲವು ಮಕ್ಕಳು ಆತ್ಮೀಯ ವಾರ್ತಾಲಾಪ ಮಾಡುತ್ತಾ ತನ್ನ ಪ್ರತಿಯೂ ಸಹ ದೂರನ್ನು ಹೇಳುತ್ತಾರೆ ಹೇಗೆ ತಂದೆ ಮಕ್ಕಳ ಮೇಲೆ ಶ್ರೇಷ್ಠ ಆಸೆಯನ್ನು ಇಡುತ್ತಾರೆ. ಏನನ್ನು ಬಯಸುತ್ತಾರೆ ಎಷ್ಟು ಬಯಸುತ್ತಾರೆ ಅಷ್ಟು ಇಲ್ಲ ಎಂದು ತಂದೆಯು ಮಕ್ಕಳಿಗೆ ಹೇಳುತ್ತಾರೆ. ಇದರ ಕಾರಣವೇನು? ಎಂದು ಕೇಳುತ್ತಾರೆ. ಇದು ಅತಿ ಸೂಕ್ಷ್ಮ ವ್ಯರ್ಥ ಕರ್ಮ ಬುದ್ಧಿಯನ್ನು ಮನಸ್ಸನ್ನು ಶ್ರೇಷ್ಠ ಅನುಭವ ಮಾಡಲು ಬಿಡುವುದಿಲ್ಲ. ಯೋಗವನ್ನು ಜೋಡಿಸಲು ಕುಳಿತುಕೊಳ್ಳತ್ತಾರೆ ಆದರೆ ಹೆಚ್ಚು ಸಮಯ ಯುದ್ಧದಲ್ಲಿಯೇ ಸಮಾಪ್ತಿಯಾಗುತ್ತದೆ. ವ್ಯರ್ಥವನ್ನು ಅಳಿಸಿ ಸಮರ್ಥರಾಗುವುದರಲ್ಲಿಯೇ ಸಮಯ ಹೊರಟುಹೋಗುತ್ತದೆ ಆದ್ದರಿಂದ ಏನು ಮಾಡಬೇಕು? ಎಷ್ಟು ಶ್ರೇಷ್ಠರಾಗುತ್ತೀರೋ ಅಷ್ಟೇ ಶ್ರೇಷ್ಠತೆಯಲ್ಲಿ ಗಮನವನ್ನೂ ಸಹ ಹೆಚ್ಚಿನದಾಗಿ ಇಡಬೇಕಾಗುತ್ತದೆ.

ಬ್ರಾಹ್ಮಣ ಜೀವನದ ನಶೆಯಲ್ಲಿರಬೇಕು. ನಶೆಯಲ್ಲಿರುವ ಅರ್ಥ ಏನು ಬಂದಿತೋ ಅದನ್ನು ಮಾಡುವುದು, ಮಸ್ತರಾಗಿರುವುದಲ್ಲ. ಇದು ಅಲ್ಪಕಾಲದ ಮಾತಿನ ನಶೆ ಅಥವಾ ಅಲ್ಪಕಾಲದ ಸಂಬಂಧ-ಸಂಪರ್ಕದ ನಶೆ. ಸದಾ ಕಾಲದ ಪ್ರಸನ್ನಚಿತ್ತ ಸ್ಥಿತಿಯಿಂದ ಭಿನ್ನವಾಗಿದೆ. ಇದನ್ನು ನಶೆ ಎಂದು ತಿಳಿಯಬೇಡಿ. ಏನು ಬಂತೋ ಅದನ್ನು ಹೇಳುವುದು, ಏನು ಬಂತೋ ಅದನ್ನು ಮಾಡುವುದು, ನಾವಂತೂ ನಶೆಯಲ್ಲಿದ್ದೇವೆಂದು ಹೇಳಿದ್ದೇವೆ. ಈ ರೀತಿ ಅಲ್ಪಕಾಲದ ಮನ ಬಂದ ಹಾಗೆಯೇ ವರ್ತಿಸಬಾರದು. ಸದಾಕಾಲದ ಆತ್ಮಿಕ ನಶೆಯಲ್ಲಿರಿ. ಇದು ಯಥಾರ್ಥ ಬ್ರಾಹ್ಮಣ ಜೀವನವಾಗಿದೆ. ನಶೆಯಲ್ಲೂ ಇರಿ ಮತ್ತು ಕರ್ಮದಗತಿಯ ಜ್ಞಾನವನ್ನೂ ತಿಳಿದುಕೊಳ್ಳಿ ಅಗಲೇ ಏನು ಬೇಕೋ ಹೇಗೆ ಬೇಕೋ ಹಾಗೆಯೇ ಅನುಭವ ಮಾಡುತ್ತಿರುತ್ತೀರಿ. ತಿಳಿಯಿತೇ? ಕರ್ಮದ ಗುಹ್ಯಗತಿಯನ್ನು ತಿಳಿಯಿರಿ. ಮತ್ತು ಖಜಾನೆಯ ಜಮಾದ ಫಲಿತಾಂಶವನ್ನು ತಿಳಿಸುತ್ತೇವೆ. ಒಳ್ಳೆಯದು.

**ನಾಲ್ಕಾರು ಕಡೆಯ ಚಿಂತೆಯಿಂದ ದೂರ ನಿಶ್ಚಿಂತಚಕ್ರವರ್ತಿಗಳಾದ ಆತ್ಮರಿಗೆ, ಸದಾ ಪ್ರಸನ್ನಚಿತ್ತ ವಿಶೇಷ ಅತ್ಮರಿಗೆ, ಸದಾ ಸ್ವಯಂನಪ್ರತಿ ಮತ್ತು ಸರ್ವ ಆತ್ಮರ ಪ್ರತಿ ಶ್ರೇಷ್ಠ ಪರಿವರ್ತನಾಶಕ್ತಿಯನ್ನು ಕರ್ಮದಲ್ಲಿ ತರುವಂತಹ ಕರ್ಮಯೋಗಿ ಆತ್ಮರಿಗೆ ಸದಾ ರಚಯಿತ-ರಚನೆಯನ್ನು ತಿಳಿದಿರುವಂತಹ ಮತ್ತು ಕರ್ಮದ ಸಿದ್ಧಾಂತವನ್ನೂ ಸಹ ತಿಳಿದಿರುವಂತಹ ಜ್ಞಾನಸ್ವರೂಪ ಆತ್ಮರಿಗೆ ಬಾಪ್ ದಾದಾರವರ ಪ್ರಿಯಸ್ಮೃತಿಗಳು ಹಾಗೂ ನಮಸ್ತೆ.**

**ದಾದಿಯರೊಂದಿಗೆ ಭೇಟಿ:-** ವರ್ತಮಾನ ಸಮಯ ಯಾವ ಮಾತಿನ ಅವಶ್ಯಕತೆ ಇದೆ? ಕರ್ಮಗಳ ಗುಹ್ಯಗತಿಯ ಜ್ಞಾನ ಮರ್ಜ್ ಆಗಿದೆ. ಆದ್ದರಿಂದಲೇ ಹುಡುಗಾಟಿಕೆ ಬರುತ್ತದೆ. ಪುರುಷಾರ್ಥಿಯು ಆಗಿದ್ದಾರೆ ಆದರೆ ಪುರುಷಾರ್ಥದಲ್ಲಿ ಹುಡುಗಾಟಿಕೆ ಬಂದು ಬಿಡುತ್ತದೆ ಆದ್ದರಿಂದ ಇದರ ಅವಶ್ಯಕತೆ ಇದೆ. ಬಾಪ್-ದಾದಾರವರು ಎಲ್ಲರ ರಿಜಲ್ಟ್ ಅನ್ನು ನೋಡುತ್ತಾರೆ. ಏನು ನಡೆಯುತ್ತಿದೆ ಅದು ಬಹಳ ಒಳ್ಳೆಯದು ಆದರೆ ಈಗ ಒಳ್ಳೆಯದಕ್ಕಿಂತ ಒಳ್ಳೆಯದಾಗಬೇಕಾಗಿದೆ. ಬಿಜಿಯಾಗಿ

ಇರಬೇಕಾಗುತ್ತದೆಯಲ್ಲವೇ ಹೆಚ್ಚು ಸಮಯ ಬಿಜಿ ಯಾವುದರಲ್ಲಿ ಇರಬೇಕಾಗುತ್ತದೆ? ಯಾವ ಮಾತಿನಲ್ಲಿ ಹೆಚ್ಚು ಸಮಯ ಕೊಡಬೇಕಾಗುತ್ತದೆ? ಒಂದು ವೇಳೆ ನಿಮಗೆ ನಿಮ್ಮ ಸ್ಥಿತಿ ಅತೀತ ಹಾಗೂ ಪ್ರಿಯವಾಗಿದೆ ಆದರೆ ಸಮಯವನ್ನಂತೂ ಕೊಡಬೇಕಾಗುತ್ತದೆ ಎಂದ ಮೇಲೆ ಇದೇ ಸಮಯದಲ್ಲಿ ಪವರ್ ಫುಲ್ ಶಕ್ತಿಶಾಲಿ ಲೈಟ್ ಹೌಸ್ ಮೈಟ್ ಹೌಸ್ ಆಗಿ ವೈಬ್ರೇಷನ್ ಹರಡಿಸುತ್ತಿದ್ದರೆ ಏನಾಗುವುದು? ಸಂಘಟಿತ ರೂಪನಲ್ಲಿ ಇದೇ ವಾತಾವರಣವಿರಲಿ ಮತ್ಯಾವುದೇ ಮಾತು ಇಲ್ಲದಿದ್ದರೆ ಯಾವ ವೈಬ್ರೇಷನ್ ವಿಶ್ವದಲ್ಲಿ ಪ್ರಕೃತಿಯವರೆಗೂ ತಲುಪುತ್ತದೆ? ಈಗಂತೂ ಎಲ್ಲರೂ ಕಾಯುತ್ತಿದ್ದಾರೆ - ಯಾವಾಗ ನಮ್ಮ ರಚಯಿತ ಹಾಗೂ ಮಾ|| ರಚಯಿತ ಸಂಪನ್ನ ಹಾಗೂ ಸಂಪೂರ್ಣರಾಗಿ ನಮ್ಮೆಲ್ಲರಿಂದ ತಮ್ಮ ಸ್ವಾಗತವನ್ನು ಮಾಡಿಸಿಕೊಳ್ಳುತ್ತಾರೆ ಎಂದು. ಪ್ರಕೃತಿಯು ಸಹ ಸ್ವಾಗತ ಮಾಡುತ್ತದೆಯಲ್ಲವೇ. ಹಾಗಾದರೆ ಅದು ಸಫಲತೆಯ ಮಾಲೆಯಿಂದ ಸ್ವಾಗತ ಮಾಡಲಿ ಆ ದಿನ ಬರಲೇಬೇಕು. ಆಗ ಸಫಲತೆಯ ನಗಾಡಗಳು ಮೊಳಗುತ್ತವೆ. ಆಗ ಪ್ರತ್ಯಕ್ಷತೆಯ ನಗಾಡ ಮೊಳಗುತ್ತದೆ. ಮೊಳಗಲೇಬೇಕಲ್ಲವೇ...ಒಳ್ಳೆಯದು.

**ದಾದಿ ಚಂದ್ರಮಣಿಜಿಯವರು ಸೇವೆಗೆ ಹೋಗುವುದಕ್ಕಾಗಿ ರಜೆ ತೆಗೆದುಕೊಳ್ಳುತ್ತಿದ್ದಾರೆ:-** ಆಲ್ ರೌಂಡ್ ಆಗುವುದೇ ಶ್ರೇಷ್ಠ ಸೇವೆಯಾಗಿದೆ ಒಳ್ಳೆಯದು ಚಕ್ಕರ್ ಹಾಕುತ್ತಿರಿ. ಚಕ್ಕರ್ ಹಾಕುವ ಪಾರ್ಟ್ ಮಕ್ಕಳದ್ದೇ ಆಗಿದೆ. ತಂದೆಯಂತೂ ಅವ್ಯಕ್ತ ರೂಪದಲ್ಲಿ ಚಕ್ಕರ್ ಹಾಕಬಹುದು. ಸಾಕಾರ ರೂಪದಲ್ಲೂ ಚಕ್ಕರ್ ಹಾಕುವ ಪಾರ್ಟ್ ತಂದೆಯವರದ್ದಾಗಿಲ್ಲ. ಮಕ್ಕಳದ್ದೇ ಆಗಿದೆ!

**ಅವ್ಯಕ್ತ ಬಾಪ್-ದಾದಾರವರ ಪರ್ಸನಲ್ ಮುಲಾಕಾತ್ (ಭೇಟಿ)** -ವಿಜಯಮಾಲೆಯಲ್ಲಿ ಬರುವುದಕ್ಕಾಗಿ ತೀವ್ರ ಪುರುಷಾರ್ಥಿಗಳಾಗಿರಿ. ಸದಾ ತೀವ್ರ ಪುರುಷಾರ್ಥಿ ಆತ್ಮರಾಗಿದ್ದೀರಿ ಎಂದು ಅನುಭವ ಮಾಡುತ್ತೀರಾ? ಯಾವಾಗ ಬ್ರಾಹ್ಮಣರಾದಿರೋ ಪುರುಷಾರ್ಥವಂತೂ ಇದ್ದೇ ಇದೆ. ತೀವ್ರ ಪುರುಷಾರ್ಥವಿದೆಯೋ ಅಥವಾ ಕೇವಲ ಪುರುಷಾರ್ಥಿಗಳೋ? ಕೇಳೋದು ಹಾಗೂ ಹೇಳುವವರಿಗೆ  ಪುರುಷಾರ್ಥಿಗಳೆಂದು ಹೇಳುತ್ತಾರೋ ಅಥವಾ ತೀವ್ರ ಪುರುಷಾರ್ಥಿಗಳೆಂದು ಹೇಳುತ್ತಾರೋ? ಹೇಳುವುದು ಹಾಗೂ ಕೇಳುವುದು, ಅದರ ನಂತರ ಏನಾಗುತ್ತದೆ? ತೀವ್ರ ಪುರುಷಾರ್ಥಿ ಎಂದು ಯಾರಿಗೆ ಹೇಳಲಾಗುತ್ತದೆ - ಹೇಳುವವರಿಗೊ ಅಥವಾ ಆಗುವವರೆಗೋ? ಯಾರು ಮಾಲೆಯ 16108 ನೇ ನಂಬರ್ ನವರು ಸಹ ಹೇಳುತ್ತಾರೆ ಮತ್ತು ಕೇಳುತ್ತಾರೆ. ಇಲ್ಲವಾದರೆ ಮಾಲೆಯಲ್ಲಿ ಹೇಗೆ ಬರುತ್ತಾರೆ. ಆದರೆ 108 ರ ಮಾಲೆಯಲ್ಲಿ ಯಾರು ಬರುತ್ತಾರೆ? 108ರ ಮಾಲೆಯ ಹೆಸರೇ ಆಗಿದೆ ವಿಜಯಮಾಲೆ 16000 ದ ಮಾಲೆಯ ಹೆಸರು ವಿಜಯ ಮಾಲೆ ಅಲ್ಲ ಹಾಗಾದರೆ ಹೇಳುವುದು ಹಾಗೂ ಕೇಳುವುದು. ಇದನ್ನು ಮೆಜಾರಿಟಿ ಮಾಡುತ್ತಾರೆ ಆದರೆ ಕೇಳಿದಿರಿ ಹಾಗೂ ಆಗಿರುವಿರಿ ಇದಕ್ಕೆ ಹೇಳಲಾಗುತ್ತದೆ ತೀವ್ರ ಪುರುಷಾರ್ಥಿ. ತೀವ್ರ ಪುರುಷಾರ್ಥಿ 108 ಆಗಿದ್ದಾರೆ ಹಾಗೂ ಪುರುಷಾರ್ಥಿ 16108 ಆಗಿದ್ದಾರೆ ಹಾಗಾದರೆ ತನ್ನನ್ನು ತಾನು ಚೆಕ್ ಮಾಡಿಕೊಳ್ಳಿ - ತೀವ್ರ ಪುರುಷಾರ್ಥಿ ಆಗಿದ್ದೀನಾ? ಹೇಗಿದ್ದೀರೊ ಯಾರಾಗಿದ್ದಿರೋ ಅದನ್ನು ಮೆಜಾರಿಟಿ ತಮ್ಮನ್ನು ತಾವು ಅರಿತುಕೊಂಡಿದ್ದೀರಿ. ಕೆಲವರು ಹೀಗೂ ಇದ್ದಾರೆ ಯಾರು ತಮ್ಮನ್ನು ತಾವು ತಿಳಿದುಕೊಂಡಿಲ್ಲ. ತಪ್ಪನ್ನು ಸರಿ ಎಂದು ತಿಳಿದುಕೊಂಡು ನಡೆಯುತ್ತಾ ಹೋಗುತ್ತಾರೆ. ಮೆಜಾರಿಟಿ ತಮ್ಮ ಮನಸ್ಸಿನಲ್ಲಿ

ತಮ್ಮನ್ನು ತಾವು ಸತ್ಯವಾಗಿ ತಿಳಿದುಕೊಂಡಿದ್ದಾರೆ ನಾನು ಯಾರಾಗಿದ್ದೇನೆ ಎಂದು? ಆದ್ದರಿಂದ ಸದಾ ತಮ್ಮನ್ನು ತಾವು ನೋಡಿಕೊಳ್ಳ ಬೇರೆಯವರನ್ನಲ್ಲ.

ತಮ್ಮ ಪುರುಷಾರ್ಥವನ್ನು ಚೆಕ್ ಮಾಡಿ ಹಾಗೂ ತೀವ್ರ ಪುರುಷಾರ್ಥದಲ್ಲಿ ಬದಲಾಯಿಸಿಕೊಳ್ಳಿ. ಇಲ್ಲವಾದರೆ ಫೈನಲ್ ಸಮಯ ಬಂದಾಗ ಚೇಂಜ್ ಮಾಡಲು ಸಾಧ್ಯವಾಗುವುದಿಲ್ಲ. ಆ ಸಮಯ ಓದಿನ ಸಮಯ ಸಮಾಪ್ತಿಯಾದ ಮೇಲೆ ಪರೀಕ್ಷೆಯ ಸಮಯದಲ್ಲಿ ಓದಲು ಅವಕಾಶ ಕೊಡಲು ಆಗುವುದಿಲ್ಲ. ಒಂದು ವೇಳೆ ಯಾವುದೇ ಸ್ಟೂಡೆಂಟ್ ತಿಳಿದುಕೊಂಡರೆ - ಒಂದು ಪ್ರಶ್ನೆಯ ಉತ್ತರ ಬರುವುದಿಲ್ಲ. ಪುಸ್ತಕದಿಂದ ಓದಿ ಉತ್ತರವನ್ನು ಕೊಡುತ್ತೇನೆ ಎಂದರೆ ಅದು ಸರಿಯೇ ಅಥವಾ ತಪ್ಪೆ? ಹಾಗಾದರೆ ಆ ಸಮಯ ತಮ್ಮನ್ನು ತಾವು ಚೇಂಜ್ ಮಾಡಿಕೊಳ್ಳಲು ಸಾಧ್ಯವಿಲ್ಲ. ಯಾರಾಗಿದ್ದೀರೊ ಹೇಗಿದ್ದೀರೋ ಅಂತಹದ್ದೇ ಪ್ರಾಲಬ್ಧ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಆದರೆ ಈಗ ಚಾನ್ಸ್ ಇದೆ. ಈಗ ಟೂ ಲೇಟ್ ನ ಬೋರ್ಡ್ ಹಾಕಿಲ್ಲ. ಲೇಟ್ ನ ಬೋರ್ಡ್ ಹಾಕಿದ್ದಾರೆ. ಲೇಟ್ ಆಗಿ ಹೋಗಿದೆ ಆದರೆ ಟೂ ಲೇಟ್ ಇನ್ನೂ ಆಗಿಲ್ಲ ಆದ್ದರಿಂದ ಇನ್ನೂ ಅವಕಾಶವಿದೆ ಕೆಲವು ಸ್ಟೂಡೆಂಟ್ 6 ತಿಂಗಳಲ್ಲಿಯೂ ಪಾಸ್ ವಿತ್ ಆನರ್ ಆಗಿ ಬಿಡುತ್ತಾರೆ ಒಂದು ವೇಳೆ ಸರಿಯಾದ ಪುರುಷಾರ್ಥ ಮಾಡಿದರೆ ಸಮಯ ಸಮಾಪ್ತಿಯಾದ ನಂತರ ಏನೂ ಮಾಡಲು ಸಾಧ್ಯವಿಲ್ಲ. ತಂದೆ ಸಹ ಕರುಣೆ ತೋರಿಸಲು ಬಯಸಿದರೂ ಮಾಡಲು ಸಾಧ್ಯವಿಲ್ಲ. ಇವರು ಒಳ್ಳೆಯವರು ಇವರಿಗೆ ಮಾರ್ಕ್ಸ್ ಕೊಟ್ಟು ಬಿಡೋಣ. ಈ ರೀತಿ ತಂದೆ ಮಾಡಲು ಸಾಧ್ಯವೇ? ಆದ್ದರಿಂದ ಈಗಿನಿಂದಲೆ ಚೆಕ್ ಮಾಡಿ ಹಾಗೂ ಚೇಂಜ್ ಮಾಡಿ.

ಹುಡುಗಾಟಿಕೆಯನ್ನು ಬಿಟ್ಟು ಬಿಡಿ ಸರಿ. ನಡೆಯುತ್ತಿದ್ದೇನೆ. ತಲುಪಿ ಬಿಡುತ್ತೇವೆ ಇದು ಹುಡುಗಾಟಿಕೆಯಾಗಿದೆ. ಹುಡುಗಾಟಿಕೆಯವರಿಗೆ ಈ ಸಮಯ ಮೋಜ್ ಎನಿಸುತ್ತದೆ. ಯಾರು ಹುಡುಗಾಟಿಕೆಯಲ್ಲಿರುತ್ತಾರೋ ಅವರಿಗೆ ಯಾವುದೇ ಚಿಂತೆ ಇರುವುದಿಲ್ಲ. ಅವರು ಆರಾಮವೇ ಎಲ್ಲಾ ಆಗಿದೆ ಎಂದು ತಿಳಿದುಕೊಳ್ಳುತ್ತಾರೆ ಹಾಗಾದರೆ ಹುಡುಗಾಟಿಕೆಯನ್ನು ಇಟ್ಟುಕೊಳ್ಳಬೇಡಿ. ಸದಾ ಅಲರ್ಟ್! ಪಾಂಡವ ಸೇನೆಯಾಗಿದೆಯಲ್ಲವೇ, ಸೇನೆ ಹುಡುಗಾಟಿಕೆಯಲ್ಲಿರುತ್ತದೆಯೋ ಅಥವಾ ಅಲರ್ಟ್ ಆಗಿರುತ್ತದೆಯೋ? ಸೇನೆಯೆಂದರೆ ಅಲರ್ಟ್ ಅಥವಾ ಸಾವಧಾನ ಎಚ್ಚರಿಕೆಯಲ್ಲಿರುವವರು, ಹುಡುಗಾಟಿಕೆಯಲ್ಲಿರುವವರಿಗೆ ಸೇನೆಯ ಸೈನಿಕರೆಂದು ಹೇಳಲಾಗುವುದಿಲ್ಲ. ಹಾಗಾದರೆ ಹುಡುಗಾಟಕೆಯಲ್ಲ, ಆಟೆನ್ಷನ್. ಆದರೆ ಆಟೆನ್ಷನ್ ಸಹ ನ್ಯಾಚುರಲ್ ವಿಧಿಯಾಗಿ ಬಿಡಲಿ. ಕೆಲವರು ಆಟೆನ್ಷನ್ ನ ಟೆನ್ಶನ್ ಸಹ ಇಟ್ಟುಕೊಳ್ಳುತ್ತಾರೆ. ಟೆನ್ಸನ್ ನ ಜೀವನ ಸದಾ ಕಾಲಕ್ಕಂತು ನಡೆಯಲು ಸಾಧ್ಯವಿಲ್ಲ. ಟೆನ್ಶನ್ ನ ಜೀವನ ಸ್ವಲ್ಪ ಸಮಯ ನಡೆಯುತ್ತದೆ. ನ್ಯಾಚುರಲ್ ನಡೆಯಲು ಸಾಧ್ಯವಿಲ್ಲ. ಹಾಗಾದರೆ ಆಟೆನ್ಷನ್ ಇಡಿ ಆದರೆ "ನ್ಯಾಚುರಲ್ ಆಟೆನ್ಷನ್" ಅಭ್ಯಾಸವಾಗಿ ಬಿಡಲಿ. ಹೇಗೆ ವಿಸ್ಮೃತಿಯ ಅಭ್ಯಾಸವಾಗಿ ಬಿಟ್ಟಿತ್ತು ಬೇಡವೆಂದರೂ ಸಹ ಆಗಿ ಬಿಡುತ್ತದೆ. ಈ ಅಭ್ಯಾಸ ಆಗಿ ಬಿಟ್ಟದೆಯಲ್ಲವೇ, ನ್ಯಾಚುರಲ್ ಆಗಿ ಬಿಟ್ಟಿದೆಯಲ್ಲವೇ. ಈ ರೀತಿ ಸ್ಮೃತಿ ಸ್ವರೂಪರಿರುವ ಅಭ್ಯಾಸ ಆಗಿ ಬಿಡಲಿ, ಆಟೆನ್ಷನ್ನೆ ಅಭ್ಯಾಸವಾಗಿ . ಇದಕ್ಕೆ ಹೇಳಲಾಗುತ್ತದೆ ಅಭ್ಯಾಸದಿಂದ ಮನುಷ್ಯನಾಗಿ ಬಿಡುತ್ತಾನೆ. ಆಗಲೇ ಮಾಲೆಯಲ್ಲಿ ಬರುವಿರಿ.

ಬಹಳ ಕಾಲದ ಅಭ್ಯಾಸ ಬೇಕಾಗಿದೆ. ಸದಾ ಅಲರ್ಟ್ ಎಂದರೆ ಸದಾ ಎವರ್ ರೆಡಿ. ನಿಮಗೆ ಏನು ನಿಶ್ಚಯವಿದೆ. ವಿನಾಶದ ಸಮಯದವರೆಗೂ ಇರುತ್ತೇವೆಯೇ ಅಥವಾ ಮೊದಲೇ ಹೋಗುತ್ತೇವೆಯೇ? ಮೊದಲೇ ಹೋಗಬಹುದು ಅಲ್ಲವೇ

ಆದ್ದರಿಂದ ಎವರ್ ರೆಡಿಯಾಗಿರಿ. ವಿನಾಶ ನಿಮಗಾಗಿ ಕಾಯಲಿ, ನೀವು ವಿನಾಶಕ್ಕಾಗಿ ಕಾಯಬೇಡಿ. ಅದು ರಚನೆಯಾಗಿದೆ. ನೀವು ರಚಯಿತರಾಗಿದ್ದೀರಿ. ಸದಾ ಎವರ್ ರೆಡಿ. ಏನು ತಿಳಿದುಕೊಂಡಿದ್ದೀರಿ. ಅಟೆನ್ಷನ್ ಇಡಿ. ಏನೇ ಬಲಹೀನತೆ ಅನುಭವವಾದರೂ ಅದನ್ನು ಬಹಳ ಬೇಗ ಸಮಾಪ್ತಿ ಮಾಡಿ. ಸಂಪನ್ನ ಆಗುವುದು ಅರ್ಥಾತ್ ಬಲಹೀನತೆಗಳನ್ನು ಸಮಾಪ್ತಿ ಮಾಡುವುದು. ಹೀಗಲ್ಲ ಇಲ್ಲಿ ಬಂದರೆ ಇಲ್ಲಿಯ ರೀತಿ ಅಲ್ಲಿ ಹೋದರೆ ಅಲ್ಲಿನ ರೀತಿ. ಎಲ್ಲರೂ ತೀವ್ರ ಪುರುಷಾರ್ಥಿಗಳಾಗಿ ಹೋಗಿ. ಒಳ್ಳೆಯದು.

ರಿವೈಸ್ ಕೋರ್ಸ್ 21-11-1992

***ಕರ್ಮದ ಗುಹ್ಯ ಗತಿಯ ಜ್ಞಾತ ಆಗಿ***

ಕರ್ಮದ ಗತಿಯ ಗುಹ್ಯ ರಹಸ್ಯವನ್ನು ಸದಾ ಎದುರಿನಲ್ಲಿ ಇಟ್ಟುಕೊಳ್ಳಿ. ಒಂದು ವೇಳೆ ಯಾರಾದಾದರೂ ಕೆಟ್ಟದ್ದನ್ನು ಅಥವಾ ತಪ್ಪಿನ ಮಾತನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದರ ಜೊತೆಗೆ ವರ್ಣನೆ ಮಾಡುತ್ತಿರೆಂದರೆ ಆ ವ್ಯರ್ಥ ವರ್ಣನೆ ತಮ್ಮ ಬಳಿಯೇ ದೊಡ್ಡ ರೂಪದಲ್ಲಿ ಹಿಂತಿರುಗಿ ಬರುತ್ತದೆ. ಯಾರದಾದರೂ ತಪ್ಪನ್ನು ಅಥವಾ ಕೆಟ್ಟದ್ದನ್ನು ಹರಡಿಸುವ ಸಂಸ್ಕಾರವಿದ್ದರೆ ಅಥವಾ ನಿಂದನೆ ಮಾಡುವ ಸಂಸ್ಕಾರವಿದ್ದರೆ ಅದೇ ನಿಂದನೆಯನ್ನು ಎರಡು ಪಟ್ಟು ನೀವು ಪಡೆಯುತ್ತೀರಿ. ಒಂದು ವೇಳೆ ತಮಗೆ ಯಾರನ್ನಾದರೂ ಸರಿಪಡಿಸಬೇಕೆಂಬ ಶುಭ ಭಾವನೆ ಇದ್ದರೆ ಆ ತಪ್ಪು ಮಾತನ್ನು ಶುಭ ಭಾವನೆಯ ಸ್ವರೂಪದಲ್ಲಿ ವಿಶೇಷ ನಿಮಿತ್ತ ಸ್ಥಾನದಲ್ಲಿ ತಿಳಿಸಬಹುದು. ಆ ಮಾತನ್ನು ಹರಡುವುದು ತಪ್ಪಾಗಿದೆ ಕೆಲವರು ಹೇಳುತ್ತಾರೆ ನಾನು ಯಾರಿಗೂ ಹೇಳಲಿಲ್ಲ ಆದರೆ ಅವರು ಹೇಳುತ್ತಿದ್ದರು, ನಾನು ಹಾ, ಹಾ ಎಂದು ಹೇಳಿದೆ ಆದರೆ ಮಾತನಾಡಲಿಲ್ಲ, ಕೆಟ್ಟ ಕರ್ಮ ಮಾಡಲಿಲ್ಲ, ಆದರೆ ನೋಡಿದೆವು, ಜೊತೆಯನ್ನು ಕೊಟ್ಟೆವು ಎಂದರೆ ಅದನ್ನು ಸಹ ಪಾಪವೆಂದು ಹೇಳಲಾಗುತ್ತದೆ. ಹೌದು ಹೌದು ಎನ್ನುವುದು ಸಹ ಕರ್ಮದ ಗತಿಯ ಪ್ರಮಾಣ ಪಾಪದ ಭಾಗಿಧಾರರಾಗುವುದಾಗಿದೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮನಿಂದ ಲಭಿಸಿರುವ ಸರ್ವ ಖಜಾನೆಗಳನ್ನು ಜಮಾ ಮಾಡಿಕೊಂಡು ಆತ್ಮಿಕ ನಶೆಯಲ್ಲಿದ್ದು ಆತ್ಮಿಕ ಗರ್ವವನ್ನು ಅನುಭವ ಮಾಡಿಕೊಂಡು ನನ್ನ ಪ್ರತಿಯೊಂದು ಕರ್ಮದಲ್ಲಿ ನಿಶ್ಚಿಂತ ಚಕ್ರವರ್ತಿಯ ಹೊಳಪು ಕಂಡಿದೆ.

2. ನಾನು ಪ್ರತಿಯೊಂದು ಕರ್ಮದಲ್ಲಿ ಸ್ವಯಂ ನ ಸಂಬಂಧದಲ್ಲಿ ಅಥವಾ ಸರ್ವರ ಸಂಬಂಧದಲ್ಲಿ ಅಥವಾ ಪ್ರಕೃತಿಯ ಸಂಬಂಧದಲ್ಲಿಯೂ ಯಾವ ಸಮಯದಲ್ಲಾದರೂ ಯಾವ ವಿಷಯದಲ್ಲಾದರೂ ಸಂಕಲ್ಪ ಮಾತ್ರವೂ ಕೂಡ ಪ್ರಶ್ನಾರ್ಥಕವಿಲ್ಲದ ಪ್ರಸನ್ನ ಚಿತ್ತಾಗಿ ಇರುವ ನಿಶ್ಚಿಂತಾ ಚಕ್ರವರ್ತಿ.

3. ನಾನು ಪ್ರತಿಯೊಂದು ಕರ್ಮವನ್ನು ಮಾಡುತ್ತಾ, ಮಾಡುತ್ತಾ, ಕೇಳುತ್ತಾ, ಯೋಚಿಸುತ್ತಾ ಕೂಡ ಏನು ಆಗುತ್ತಿದೆಯೋ ಅದು ನನ್ನ ಸಲುವಾಗಿ ಒಳ್ಳೆಯದೇ ಮತ್ತು ಸದಾ ಒಳ್ಳೆಯದೇ ಆಗುತ್ತದೆ ಎಂದು ಸದಾ ಪ್ರಸನ್ನವಾಗಿ ಇರುವ ಪ್ರಸನ್ನ ಚಿತ್ತ ಸ್ವರೂಪ.

4. ನಾನು ಶಾಂತಿಯ ಶಕ್ತಿಯಿಂದ ಕೆಟ್ಟ ವಿಷಯವಾದರೂ, ಸಂಬಂಧ ಕೆಟ್ಟದಾಗಿ ಅನುಭವವಾಗುತ್ತಿದ್ದರೂ, ಕೆಟ್ಟದ್ದನ್ನು ಒಳ್ಳೆಯದರಲ್ಲಿ ಪರಿವರ್ತನೆ ಮಾಡಿಕೊಂಡು ಸ್ವಯಂ ಕೂಡ ಧಾರಣೆ ಮಾಡಿ ಇತರರಿಗೂ ಕೂಡ ನನ್ನ ಶುಭ ಭಾವನೆಯ ಶ್ರೇಷ್ಠ ಸಂಕಲ್ಪದಿಂದ ಕೆಟ್ಟದ್ದನ್ನು ಪರಿವರ್ತನೆ ಮಾಡಿ ಶ್ರೇಷ್ಠತೆಯನ್ನು ಧಾರಣೆ ಮಾಡುವ ಶಕ್ತಿಯನ್ನು ಕೊಡುವ ಪ್ರಸನ್ನ ಚಿತ್ತ ಸ್ವರೂಪ.

5. ನಾನು ಸರ್ವಾತ್ಮರ ತಪ್ಪೊಪ್ಪುಗಳನ್ನು ತಿಳಿದುಕೊಂಡು ನನ್ನ ಮನಸ್ಸು, ಬುದ್ಧಿ, ವೃತ್ತಿ, ಮಾತಿನಲ್ಲಿ ಧಾರಣೆ ಮಾಡದೆ, ಸಮಾವೇಶ ಮಾಡಿಕೊಳ್ಳದೆ ಬುದ್ಧಿ, ವೃತ್ತಿ, ವಾಣಿಯನ್ನು ಸ್ವಚ್ಛವಾಗಿಟ್ಟುಕೊಂಡಿರುವ ಪರಿಪಕ್ವ ಸ್ವರೂಪ.